# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

**ದಿನಾಂಕ: 01.12.2025** ರಂದು ಅಪರಾಹ್ನ **3:30** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 38ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| | |
|---|---|
| **ಉಪಸ್ಥಿತ ಶೈಕ್ಷಣಿಕ ಮಂಡಳಿ ಸದಸ್ಯರು** | |
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | **ಪ್ರೊ. ನವೀನ್ ಕುಮಾರ್ ಎಸ್.ಕೆ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. |
| **ಪ್ರೊ. ಎಂ. ರಾಮನಾಥಂ ನಾಯುಡು**<br>ಡೀನ್ (ಶೈಕ್ಷಣಿಕ),<br>ಮತ್ತು ಸ್ಕೂಲ್ ನಿರ್ದೇಶಕರು, ಭಾಷ ನಿಕಾಯ,<br>ಕರಾಮುವಿ, ಮೈಸೂರು. | **ಡಾ. ಸಿ.ಎಸ್. ಆನಂದಕುಮಾರ್**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. |
| **ಡಾ. ಎನ್.ಆರ್. ಚಂದ್ರೇಗೌಡ**<br>ಡೀನ್ (ಅಧ್ಯಯನ ಕೇಂದ್ರಗಳು)<br>ಕರಾಮುವಿ, ಮೈಸೂರು. | **ಡಾ. ಪ್ರಕಾಶ**<br>ಗ್ರಂಥಪಾಲಕರು ಮತ್ತು ಸದಸ್ಯರು ಶೈಕ್ಷಣಿಕ ಮಂಡಳಿ<br>ಕರಾಮುವಿ, ಮೈಸೂರು. |
| **ಸ್ಕೂಲ್ ನಿರ್ದೇಶಕರು** | |
| **ಪ್ರೊ. ಶಂಕರನಾರಣಪ್ಪ** | ಸಮಾಜ ವಿಜ್ಞಾನ ನಿಕಾಯ |
| **ಪ್ರೊ. ಎನ್.ಜೆ. ರಾಜು** | ವಿಜ್ಞಾನ ನಿಕಾಯ |
| **ಪ್ರೊ. ಸಿ. ಮಹದೇವಮೂರ್ತಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಪ್ರೊ. ರಮಾನಂದ ಎಂ. ಎಸ್** | ವಾಣಿಜ್ಯ ನಿಕಾಯ |
| | |
| **ಶ್ರೀಮತಿ ಸುನೀತ** | ನಿರ್ದೇಶಕರು, ಸಿ.ಓ.ಇ. |
| **ಅನುಪಸ್ಥಿತರು** | |
| **ಡಾ. ನಿರಂಜನ್ ರಾಜ್ ಎಸ್**<br>ಹಣಕಾಸು ಅಧಿಕಾರಿಗಳು (ಕಾ/ಭಾ)<br>ಹಾಗೂ ಸ್ಕೂಲ್ ನಿರ್ದೇಶಕರು ಶಿಕ್ಷಣ ನಿಕಾಯ<br>ಮತ್ತು ನಿರ್ದೇಶಕರು, CIQA | |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರ ಸೂಚನೆಯಂತೆ ಡೀನ್ (ಶೈಕ್ಷಣಿಕ) ರವರು ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯಲ್ಲಿ ಹಾಜರಿದ್ದ ಶೈಕ್ಷಣಿಕ ಮಂಡಳಿ ಸದಸ್ಯರು ಹಾಗೂ ಸ್ಕೂಲ್ ನಿರ್ದೇಶಕರುಗಳನ್ನು 38ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಸ್ವಾಗತಿಸಿದರು.

ಮಾನ್ಯ ಕುಲಪತಿಗಳ ಸೂಚನೆಯಂತೆ ಡೀನ್ (ಶೈಕ್ಷಣಿಕ) ರವರು 38ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿತವಾಗಿರುವ ವಿಷಯಗಳನ್ನು ಕ್ರಮವಾಗಿ ಸಭೆಗೆ ಮಂಡಿಸಿದರು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 37.01**

ವಿಷಯ: **ಎಂ.ಎಸ್ಸಿ. ಭೂಗೋಳಶಾಸ್ತ್ರ ಕಾರ್ಯಕ್ರಮದ ಪ್ರವೇಶಾತಿ ಶುಲ್ಕವನ್ನು ಕಡಿಮೆ ಮಾಡುವಂತೆ ಕೋರಿ ಮನವಿ.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಎಂ.ಎಸ್ಸಿ. ಭೂಗೋಳಶಾಸ್ತ್ರ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕವನ್ನು ಕಡಿಮೆ ಮಾಡುವಂತೆ ಕೋರುತ್ತಾ ಪ್ರಸ್ತುತದಲ್ಲಿ ಸ್ನಾತಕ ಪದವಿಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳು ಭೂಗೋಳಶಾಸ್ತ್ರ ಸ್ನಾತಕೋತ್ತರ ಪದವಿಗೆ ಸೇರಲು ಆಸಕ್ತಿಯಿದ್ದರು ಪ್ರವೇಶಾತಿ ಶುಲ್ಕ ಹೆಚ್ಚಾಗಿರುವ ಕಾರಣದಿಂದ ಪ್ರವೇಶ ಪಡೆಯಲು ಸಿದ್ದರಿರುವುದಿಲ್ಲ. ಎಂ.ಎಸ್ಸಿ. ಭೂಗೋಳಶಾಸ್ತ್ರ ಪ್ರವೇಶಾತಿ ಪಡೆಯುವ ಸಂಬಂಧ ಅನೇಕ ವಿದ್ಯಾರ್ಥಿಗಳು ವಿಭಾಗಕ್ಕೆ ಬಂದು ಮೌಖಿಕವಾಗಿ ಪ್ರವೇಶಾತಿ ಶುಲ್ಕವನ್ನು ಕಡಿಮೆ ಮಾಡುವಂತೆ ವಿನಂತಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವಿಭಾಗ ಮಟ್ಟದ ಸಭೆಯಲ್ಲಿ ಚರ್ಚಿಸಿ, ವಿಶ್ವವಿದ್ಯಾನಿಲಯದ 38 ನೇ ವಿಶೇಷ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಪ್ರವೇಶಾತಿ ಶುಲ್ಕವನ್ನು ಶೇ. 40 ರಿಂದ ಶೇ. 50 ರಷ್ಟು ಕಡಿಮೆ ಮಾಡುವಂತೆ ಕೋರುತ್ತಾ ತಾವು ಶೈಕ್ಷಣಿಕ ಮಂಡಳಿಯಲ್ಲಿ ವಿದ್ಯಾರ್ಥಿಗಳ ಮತ್ತು ವಿಭಾಗದ ಹಿತದೃಷ್ಟಿಯಿಂದ ಧನಾತ್ಮಕವಾಗಿ ನಿರ್ಣಯಿಸುವಂತೆ ವಿಷಯ ಮಂಡಿಸಿದೆ.

ತೀರ್ಮಾನ: **M.Sc., in Geography ಎಂಬ Nomenclature ಇದ್ದಾಗ ವಿಜ್ಞಾನ ವಿಭಾಗಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನೇ ಮುಂದುವರಿಸಬೇಕಾಗುತ್ತದೆ. ಒಂದು ವೇಳೆ ಎಂ.ಎ. ಭೂಗೋಳ ಶಾಸ್ತ್ರ ಎಂದು ಬದಲಾವಣೆ ಮಾಡಿಕೊಂಡಲ್ಲಿ, ಶುಲ್ಕ ನಿಗಧಿ ಸಮಿತಿಗೆ ಶುಲ್ಕ ಪರಿಷ್ಕರಣೆ ಬಗ್ಗೆ ಮಂಡಿಸಿ ಸಮಿತಿಯ ತೀರ್ಮಾನದಂತೆ ಶುಲ್ಕ ಪರಿಷ್ಕರಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವುದು ಎಂದು ತೀರ್ಮಾನಿಸಲಾಯಿತು.**

-----

**ವಿಷಯ ಸಂಖ್ಯೆ: 37.02**

**ವಿಷಯ** :ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಶ್ರೇಷ್ಠ ಕರ್ನಾಟಕದ ಸಾಂಸ್ಕೃತಿಕ ನಾಯಕರಾದ ಬಸವಣ್ಣನವರ ಅಧ್ಯಯನ ಮತ್ತು ವಿಸ್ತರಣಾ ಪೀಠವನ್ನು ಸ್ಥಾಪಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 12 ನೇ ಶತಮಾನದ ಶ್ರೇಷ್ಠ ಸಮಾಜ ಸುಧಾರಕ, ಶ್ರೇಷ್ಠ ಕರ್ನಾಟಕದ ಸಾಂಸ್ಕೃತಿಕ ನಾಯಕ, ಕವಿ ಮತ್ತು ರಾಜನೀತಿಜ್ಞ, ಜಾತಿ–ಆಧಾರಿತ ತಾರತಮ್ಯವನ್ನು ವಿರೋಧಿಸಿ ಎಲ್ಲ ಜಾತಿ ಮತ್ತು ಲಿಂಗದವರನ್ನು ಆಧ್ಯಾತ್ಮಿಕ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಲು ಪ್ರಜಾಪ್ರಭುತ್ವದ ವೇದಿಕೆಯಾಗಿ ಅನುಭವ ಮಂಟಪವನ್ನು ಸ್ಥಾಪಿಸಿ ಅವಕಾಶ ಕಲ್ಪಿಸಿಕೊಟ್ಟು ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯ ಎಂದರೆ ಸ್ವರ್ಗ ಎಲವೂ ಎಂದರೆ ನರಕ ಎಂದು ಸಾರುವ ಮೂಲಕ ತಮ್ಮ ಮಾನವಾತಾ ವಾದಕ್ಕೆ ಸಾಹಿತ್ಯದ ಸ್ಪರ್ಶ ನೀಡಿ ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ನೀಡಿ ಸುಮಾರು 1500 ವಚನಗಳನ್ನು ರಚಿಸಿರುವ ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ, ಮಹಾ ಮಾನವತಾ

ಕುಲಸಚಿವರು ಕುಲಪತಿಗಳು

ವಾದಿಗಳಾದ ಬಸವಣ್ಣನವರ ಅಧ್ಯಯನ ಮತ್ತು ವಿಸ್ತರಣಾ ಪೀಠವನ್ನು ಸ್ಥಾಪಿಸುವಂತೆ ಕರಾಮುವಿಯ ಸಿಬ್ಬಂದಿವರ್ಗದವರು ಮನವಿ ಪತ್ರವನ್ನು ನೀಡಿರುತ್ತಾರೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲು ಅನುಮೋದನೆ ಕೋರಲಾಗಿದೆ.

**ತೀರ್ಮಾನ:**

- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಶ್ರೇಷ್ಠ ಕರ್ನಾಟಕದ ಸಾಂಸ್ಕೃತಿಕ ನಾಯಕರಾದ ಬಸವಣ್ಣನವರ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಅನುಮೋದನೆ ನೀಡಲಾಯಿತು.**
- **ಈಗಾಗಲೇ ಸ್ಥಾಪಿತವಾಗಿರುವ ಪೀಠ / ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಗಳಿಗೆ ಹಂಚಿಕೆ ಮಾಡಿರುವ ಮೊತ್ತದಷ್ಟೆ ಹಣವನ್ನು ಹೊಸದಾಗಿ ಸ್ಥಾಪಿತವಾಗಿರುವ ಮತ್ತು ಸ್ಥಾಪಿತವಾಗುವ ಪೀಠ / ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಗಳಿಗೆ ಠೇವಣಿ ಇಡಲು ತೀರ್ಮಾನಿಸಲಾಯಿತು.**

-----

## ವಿಷಯ ಸಂಖ್ಯೆ: 38.03

ವಿಷಯ :ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ದಾಸ ಶ್ರೇಷ್ಠ ಶ್ರೀ ಭಕ್ತ ಕನಕದಾಸರ ಸಂಶೋಧನಾ ಮತ್ತು ವಿಸ್ತರಣಾ ಪೀಠವನ್ನು ಸ್ಥಾಪಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಭಕ್ತ ಕನಕದಾಸರು ಕನ್ನಡ ಭಾಷೆಯ ಪ್ರಮುಖ ಹರಿದಾಸರಾಗಿದ್ದು, ಕರ್ನಾಟಕ ಸಂಗೀತಕ್ಕೆ ಅಪಾರ ಕೊಡುಗೆ ನೀಡಿದ ಸಂತ ಕವಿ. ಯುದ್ಧದಲ್ಲಿ ಸೋಲಿನ ನಂತರ ವೈರಾಗ್ಯ ಹೊಂದಿ, ಭಕ್ತಿ ಮಾರ್ಗವನ್ನು ಅನುಸರಿಸಿದ ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರು. ವ್ಯಾಸರಾಯರಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತ ಕನಕದಾಸರು ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರಾಗಿದ್ದು, ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ, ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆಯಲ್ಲಿ ಸುಮಾರು 316 ಕೀರ್ತನೆಗಳ ಬಗ್ಗೆ ಅಧ್ಯಯನ ಮಾಡುವ ಸಂಬಂಧ ರಾಜ್ಯದ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಕನಕದಾಸ ಅಧ್ಯಯನ ಪೀಠ ಹಾಗೂ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿರುವುದರಿಂದ ಹರಿದಾಸರಾದ ಶ್ರೀ ಭಕ್ತ ಕನಕದಾಸರ ಬಗ್ಗೆ ಮತ್ತಷ್ಟು ಅಧ್ಯಯನ ಮತ್ತು ಸಂಶೋಧನೆ ಮಾಡುವ ಸಲುವಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲೂ ದಾಸ ಶ್ರೇಷ್ಠ ಶ್ರೀ ಭಕ್ತ ಕನಕದಾಸರ ಸಂಶೋಧನಾ ಮತ್ತು ವಿಸ್ತರಣಾ ಪೀಠವನ್ನು ಸ್ಥಾಪಿಸುವಂತೆ ಕರಾಮುವಿಯ ಸಿಬ್ಬಂದಿವರ್ಗದವರು ಮನವಿ ಪತ್ರವನ್ನು ನೀಡಿರುತ್ತಾರೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲು ಅನುಮೋದನೆ ಕೋರಲಾಗಿದೆ.

**ತೀರ್ಮಾನ:**

- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ದಾಸ ಶ್ರೇಷ್ಠ ಶ್ರೀ ಭಕ್ತ ಕನಕದಾಸರ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಅನುಮೋದನೆ ನೀಡಲಾಯಿತು. ಮುಂದುವರೆದು,**
- **ಈಗಾಗಲೇ ಸ್ಥಾಪಿತವಾಗಿರುವ ಪೀಠ / ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಗಳಿಗೆ ಹಂಚಿಕೆ ಮಾಡಿರುವ ಮೊತ್ತದಷ್ಟೆ ಹಣವನ್ನು ಹೊಸದಾಗಿ ಸ್ಥಾಪಿತವಾಗಿರುವ ಮತ್ತು ಸ್ಥಾಪಿತವಾಗುವ ಪೀಠ / ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಗಳಿಗೆ ಠೇವಣಿ ಇಡಲು ತೀರ್ಮಾನಿಸಲಾಯಿತು.**

-----

ಕುಲಸಚಿವರು | ಕುಲಪತಿಗಳು

ವಿಷಯ ಸಂಖ್ಯೆ: 38.04

ವಿಷಯ: ಭಾಷಾವಿಜ್ಞಾನ ವಿಭಾಗವನ್ನು ಪ್ರತ್ಯೇಕ ಅಧ್ಯಯನ ವಿಭಾಗವನ್ನಾಗಿ ಅಧಿಸೂಚನೆ ಹೊರಡಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಭಾಷಾವಿಜ್ಞಾನ ಅಧ್ಯಯನ ವಿಭಾಗದಿಂದ ಭಾಷಾವಿಜ್ಞಾನ ಪಿ.ಜಿ. ಸರ್ಟಿಫಿಕೇಟ್ ಕೋರ್ಸ್‌ಅನ್ನು ಪ್ರಾರಂಭಿಸಲು ಆದೇಶಸಂಖ್ಯೆ: ಕರಾಮುವಿ/ಡೀನ್(ಶೈ)07/ಕ್ರ.ಸಂ:58248/2023-24,ದಿನಾಂಕ:05.01.2024 ರಂದು ಆದೇಶ ಹೊರಡಿಸಲಾಗಿದ್ದು. ಪ್ರಸ್ತುತ 2025-2026 ನೇ ಸಾಲಿನಲ್ಲಿ ಪ್ರವೇಶಾತಿಯನ್ನು ಪ್ರಾರಂಭಿಸಲಾಗಿದೆ. ಈ ಸಂಬಂಧ ಪ್ರತ್ಯೇಕ ಅಧ್ಯಯನ ವಿಭಾಗವನ್ನಾಗಿ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ. ಮತ್ತು ಡಾ. ಎ.ಎಸ್. ಮಹದೇವ ರವರನ್ನು ಆದೇಶಸಂಖ್ಯೆ:ಕರಾಮುವಿ/ಡೀನ್(ಶೈ)-06/ಕ್ರ.ಸಂ:54207/2023-24, ದಿನಾಂಕ:25.10.2023 ರ ಆದೇಶದಂತೆ ಭಾಷಾವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯನ್ನಾಗಿ ನೇಮಿಸಲಾಗಿದ್ದು. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ವಿಷಯ ಮಂಡಿಸಲು ಅನುಮೋದನೆ ಕೋರಿದೆ.

ತೀರ್ಮಾನ: ಭಾಷಾವಿಜ್ಞಾನ ವಿಭಾಗವನ್ನು ಪ್ರತ್ಯೇಕ ಅಧ್ಯಯನ ವಿಭಾಗವನ್ನಾಗಿ ಅಧಿಸೂಚನೆ ಹೊರಡಿಸುವ ವಿವರವಾಗಿ ಪರಿಶೀಲಿಸಿ ಮುಂದಿನ ಸಭೆಗೆ ಮರು ಮಂಡಿಸುವಂತೆ ತೀರ್ಮಾನಿಸಿ ವಿಷಯವನ್ನು **Defer** ಮಾಡಲು ತೀರ್ಮಾನಿಸಲಾಯಿತು

------

ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು

ವಿಷಯ ಸಂಖ್ಯೆ: 38.05

ವಿಷಯ : ಕರಾಮುವಿಯ ಎಲ್ಲಾ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅವಶ್ಯಕತೆಯಿರುವ ರಸಾಯನಿಕ ಪದಾರ್ಥಗಳನ್ನು ಒದಗಿಸುವ ಸಂಬಂಧ **(Rate Contract)** ಟೆಂಡರ್ ಆಹ್ವಾನಿಸುವ ಬಗ್ಗೆ

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅವಶ್ಯಕತೆಯಿರುವ ಪ್ರಯೋಗಾಲಯ ಸಲಕರಣೆ, ರಸಾಯನಿಕ ಪದಾರ್ಥಗಳು, ಗ್ಲಾಸ್ ವೇರ್ ಪಟ್ಟಿಗಳನ್ನು ಮತ್ತು ಒಂದು ವರ್ಷಕ್ಕೆ ಬೇಕಾಗುವ ಮೊತ್ತವನ್ನು ಕ್ರೂಢೀಕರಿಸಿ ಟೆಂಡರ್ ಆಹ್ವಾನಿಸುವ ಸಂಬಂಧ ಪಟ್ಟಿಯನ್ನು ಸಿದ್ಧಪಡಿಸಿ ವಿಭಾಗವಾರು ಮುಖ್ಯಸ್ಥರ ಸಹಿಯೊಂದಿಗೆ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲು ಅನುಮೋದನೆ ಕೋರಲಾಗಿದೆ.

ತೀರ್ಮಾನ: ಕರಾಮುವಿಯ ಎಲ್ಲಾ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅವಶ್ಯಕತೆಯಿರುವ ರಸಾಯನಿಕ ಪದಾರ್ಥಗಳನ್ನು ಒದಗಿಸುವ ಸಂಬಂಧ **(Rate Contract)** ಟೆಂಡರ್ ಆಹ್ವಾನಿಸುವ ಬಗ್ಗೆ ಅನುಮೋದನೆ ನೀಡಲಾಯಿತು.

-----

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ : 38.06

ವಿಷಯ : ವಿಶ್ವವಿದ್ಯಾನಿಲಯದ ಆರ್ಥಿಕ ಸಂಪನ್ಮೂಲದ ಬಗೆಗೆ.

****

ಸಭೆಯಲ್ಲಿ ವಿಶ್ವವಿದ್ಯಾನಿಲಯದ ಆರ್ಥಿಕ ಸಂಪನ್ಮೂಲದ ಬಗ್ಗೆ ವಿವರವಾಗಿ ಚರ್ಚಿಸಿ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಅನುದಾನ ದೊರೆಯದ ಹಿನ್ನೆಲೆಯಲ್ಲಿ ಸಿಬ್ಬಂದಿಗಳ ಹಾಗೂ ವಿಶ್ವವಿದ್ಯಾನಿಲಯದ ಹಿತ ದೃಷ್ಟಿಯಿಂದ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

ತೀರ್ಮಾನ : ನಮ್ಮ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳು ಭರಿಸುವ ಶುಲ್ಕಗಳಿಂದ ಆಂತರಿಕ ಸಂಪನ್ಮೂಲವನ್ನು ಕ್ರೋಢೀಕರಿಸಿ ಸಿಬ್ಬಂದಿಗಳಿಗೆ ವೇತನ, ಪಿಂಚಣಿ, ಶೈಕ್ಷಣಿಕ ಚಟುವಟಿಕೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಹಣವನ್ನು ಸರ್ಕಾರ / ಇತರೆ ವಿಶ್ವವಿದ್ಯಾನಿಲಯಗಳಿಗೆ ನೀಡದಿರಲು ತೀರ್ಮಾನಿಸಲಾಯಿತು ಮತ್ತು ಪ್ರಸ್ತುತ ಇರುವ ಮೊತ್ತವನ್ನು ಸಿಬ್ಬಂದಿಗಳ ವೇತನ, ಪಿಂಚಣಿ ಗಳಿಗೆ ಸಂಬಂಧಿಸಿದಂತೆ ಠೇವಣಿ ಇಡುವುದು ಸೂಕ್ತ ಎಂದು ತೀರ್ಮಾನಿಸಲಾಯಿತು.

-----

ವಿಷಯ ಸಂಖ್ಯೆ: 38.07

ವಿಷಯ : ಬಿ.ಎ. ಬಿ.ಕಾಂ ವಾರ್ಷಿಕ ಪದ್ಧತಿಯಲ್ಲಿದ್ದು 2026–27 ಜುಲೈ ಆವೃತ್ತಿಯಿಂದ ಸಿ.ಬಿ.ಸಿ.ಎಸ್ ಪದ್ಧತಿಯಲ್ಲಿ ಆರಂಭಿಸುವ ಬಗೆಗೆ.

****

ವಿಶ್ವವಿದ್ಯಾನಿಲಯದ ಯು.ಜಿ. ಕಾರ್ಯಕ್ರಮಗಳನ್ನು ಸಿ.ಬಿ.ಸಿ.ಎಸ್ ಪದ್ಧತಿಯಲ್ಲಿ ನೀಡಲಾಗುತ್ತಿರುತ್ತದೆ. ಆದರೆ ಬಿ.ಎ ಬಿ.ಕಾಂ ಕಾರ್ಯಕ್ರಮವನ್ನು ವಾರ್ಷಿಕ ಪದ್ಧತಿಯಲ್ಲಿ ನೀಡಲಾಗುತ್ತಿದ್ದು ಸದರಿ ಕಾರ್ಯಕ್ರಮಗಳನ್ನು ಸಹ ಸಿ.ಬಿ.ಸಿ.ಎಸ್. ಪದ್ಧತಿಯಲ್ಲಿ 2026–27ನೇ ಜುಲೈ ಆವೃತ್ತಿಯಿಂದ ನೀಡುವ ಬಗ್ಗೆ ವಿವರವಾಗಿ ಚರ್ಚಿಸಿದ ಸಭೆಯು ಕೆಳಕಂಡಂತೆ ತೀರ್ಮಾನಿಸಿತು.

ತೀರ್ಮಾನ : ಇತರೆ ದೂರ ಶಿಕ್ಷಣ ವಿಶ್ವವಿದ್ಯಾನಿಲಯಗಳಲ್ಲಿ ಬಿ.ಎ. ಬಿ.ಕಾಂ ಕಾರ್ಯಕ್ರಮವನ್ನು ಯಾವ ಪದ್ಧತಿಯಲ್ಲಿ ನೀಡಲಾಗುತ್ತಿದೆ ಎಂಬುದರ ಬಗ್ಗೆ ಹಾಗೂ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸುವ ಮುನ್ನ ಕೈಗೊಳ್ಳಬೇಕಿರುವ ಪೂರ್ವಸಿದ್ಧತೆಗಳ ಬಗ್ಗೆ ವಿವರವಾಗಿ ಪರಿಶೀಲಿಸಿ ಮುಂದಿನ ಸಭೆಗೆ ವಿಷಯ ಮಂಡಿಸುವಂತೆ ತಿಳಿಸಿ ವಿಷಯವನ್ನು **Defer** ಮಾಡಲು ತೀರ್ಮಾನಿಸಲಾಯಿತು

-----

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 38.08**

**ವಿಷಯ :** ಸಹಾಯಕ ಭಾಷಾಂತರಕಾರರ ಹುದ್ದೆಯನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಯಾಗಿ ಉನ್ನತೀಕರಿಸುವ ಬಗೆಗೆ

****

ದಿನಾಂಕ: 30.10.2025 ರಂದು ನಡೆದ 37ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ವಿಷಯ ಸಂಖ್ಯೆ: 37.16ರ ತೀರ್ಮಾನದಂತೆ ಸಹಾಯಕ ಭಾಷಾಂತರಕಾರರ ಹುದ್ದೆಯನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಯಾಗಿ ಉನ್ನತೀಕರಿಸುವ ಬಗ್ಗೆ ಚರ್ಚಿಸಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.

**ತೀರ್ಮಾನ : ಪ್ರೊ. ಮಹದೇವ ಮೂರ್ತಿ ಸಿ, ಸ್ಕೂಲ್ ನಿರ್ದೇಶಕರು, ನಿರ್ವಹಣಾ ಶಾಸ್ತ್ರ ನಿಕಾಯ ರವರ ಅಧ್ಯಕ್ಷತೆಯಲ್ಲಿ, ಡಾ. ಪ್ರಕಾಶ, ಗ್ರಂಥಪಾಲಕರು, ಪ್ರೊ. ಎನ್.ಜಿ. ರಾಜು, ಸ್ಕೂಲ್ ನಿರ್ದೇಶಕರು, ವಿಜ್ಞಾನ ನಿಕಾಯ ಮತ್ತು ಶ್ರೀಮತಿ ಸುನಿತ, ನಿರ್ದೇಶಕರು, ಸಿ.ಓ.ಇ. ಹಾಗೂ ಕಾನೂನು ಘಟಕದ ಸಿಬ್ಬಂದಿಯಾದ ಶ್ರೀ ಶಿವಣ್ಣ, ಹಿರಿಯ ಸಹಾಯಕರು, ರವರನ್ನೊಳಗೊಂಡ ಸಮಿತಿಯನ್ನು ರಚಿಸಿ ಸಮಿತಿಯಲ್ಲಿ ಈ ಬಗೆಗಿನ ಸಾಧಕ ಮತ್ತು ಬಾಧಕಗಳ ಬಗ್ಗೆ ಚರ್ಚಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ವರದಿ ಸಲ್ಲಿಸಿದಲ್ಲಿ ಅಗತ್ಯ ತೀರ್ಮಾನ ಕೈಗೊಳ್ಳಲು ತೀರ್ಮಾನಿಸಲಾಯಿತು.**

-----

**ವಿಷಯ ಸಂಖ್ಯೆ: 38.09**

**ವಿಷಯ :** ಶೈಕ್ಷಣಿಕ ಸಹಭಾಗಿತ್ವ ಸಂಸ್ಥೆಗಳ ಮೂಲಕ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು, ಸಂಸ್ಥೆಗಳು ಪದವಿ ಪ್ರಮಾಣ ಪತ್ರ / ನೈಜತೆ ಪ್ರಮಾಣ ಪತ್ರ / ವಲಸೆ ಪ್ರಮಾಣ ಪತ್ರ ಗಳನ್ನು ವಿತರಿಸುವ ಬಗೆಗೆ

****

ಶೈಕ್ಷಣಿಕ ಸಹಭಾಗಿತ್ವ ಸಂಸ್ಥೆಗಳ ಮೂಲಕ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು, ಸಂಸ್ಥೆಗಳು ಪದವಿ ಪ್ರಮಾಣ ಪತ್ರ / ನೈಜತೆ ಪ್ರಮಾಣ ಪತ್ರ / ವಲಸೆ ಪ್ರಮಾಣ ಪತ್ರ ಗಳನ್ನು ವಿತರಿಸುವ ವಿಷಯವಾಗಿ ವಿವಿಧ ಮಾನ್ಯ ಉಚ್ಚ ನ್ಯಾಯಾಲಯಗಳು ರಿಟ್ ಪ್ರಕರಣಗಳಲ್ಲಿ ಹೊರಡಿಸಿರುವ ಆದೇಶಗಳನ್ನು ಅನುಷ್ಠಾನ ಮಾಡುವ ಬಗ್ಗೆ ಕಾನೂನು ಸಲಹೆ ಪಡೆಯುವ ಸಂಬಂಧ ದಿನಾಂಕ: 29.11.2025 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ, ಮಾನ್ಯ ನಿವೃತ್ತ ನ್ಯಾಯಾಧೀಶರು, ವಿಶ್ವವಿದ್ಯಾನಿಲಯದ ವಕೀಲರುಗಳು, ಶಾಸನಬದ್ಧ ಅಧಿಕಾರಿಗಳು ಹಾಗೂ ಪರೀಕ್ಷಾ ವಿಭಾಗದ ಅಧಿಕಾರಿ / ಸಿಬ್ಬಂದಿಗಳೊಂದಿಗೆ ಆಯೋಜಿಸಲಾಗಿದ್ದ ಸಭೆಯಲ್ಲಿ ಚರ್ಚಿತವಾದ ವಿಷಯವನ್ನು ಸಭೆಗೆ ವಿವರಿಸಿ ಸದರಿ ದಿನದ ನಡಾವಳಿಯನ್ನು ವಿವರವಾಗಿ ಓದಿ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

ಕುಲಸಚಿವರು

ಕುಲಪತಿಗಳು

ಮುಂದುವರೆದು, ಸಭೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಬಗ್ಗೆ ಚರ್ಚಿಸಿ ಕೆಳಕಂಡಂತೆ ತೀರ್ಮಾನಿಸಲಾಯಿತು.

**ತೀರ್ಮಾನ : ದಿನಾಂಕ: 29.11.2025 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ, ಮಾನ್ಯ ನಿವೃತ್ತ ನ್ಯಾಯಾಧೀಶರು, ವಿಶ್ವವಿದ್ಯಾನಿಲಯದ ವಕೀಲರುಗಳು, ಶಾಸನಬದ್ಧ ಅಧಿಕಾರಿಗಳು ಹಾಗೂ ಪರೀಕ್ಷಾ ವಿಭಾಗದ ಅಧಿಕಾರಿ / ಸಿಬ್ಬಂದಿಗಳೊಂದಿಗೆ ನಡೆಸಲಾದ ಸಭೆಯ ನಡಾವಳಿಯಲ್ಲಿನ ತೀರ್ಮಾನಗಳಿಗೆ ಅನುಮೋದನೆ ನೀಡಲಾಯಿತು.**

-----

**ವಿಷಯ ಸಂಖ್ಯೆ: 38.10**

**ವಿಷಯ : Skybird College of Aviation & Management, New Delhi, ರವರನ್ನು E.L.S.C ಎಂದು ಪರಿಗಣಿಸಿ ಒಡಂಬಡಿಕೆ ಮಾಡಿಕೊಳ್ಳುವ ಬಗೆಗೆ.**

****

Skybird College of Aviation & Management, New Delhi, ರವರು ದಿನಂಕ: 28.10.2025 ರಂದು ನೀಡಿರುವ ಪ್ರಸ್ತಾವನೆಯಲ್ಲಿ ತಮ್ಮ ಸಂಸ್ಥೆಯನ್ನು E.L.S.C ಎಂದು ಪರಿಗಣಿಸಿ 1. Aviation 2. Travel and Tourism 3. Interior Designing 4. Drone and Pilot Training 5. Hospitality 6. Logistics 7. Fashion Designing 8. Artificial Intelligence ಕೋರ್ಸ್‌ಗಳನ್ನು ನಡೆಸುವ ಸಂಬಂಧ ಒಡಂಬಡಿಕೆ ಮಾಡಿಕೊಳ್ಳಲು ಕೋರಿರುತ್ತಾರೆ. ಈ ಬಗ್ಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಶಾಸನಬದ್ಧ ಅಧಿಕಾರಿಗಳೊಂದಿಗೆ ದಿನಾಂಕ: 30.10.2025 ರಂದು ಬೆಳಿಗ್ಗೆ ನಡೆದ ಸಭೆಯಲ್ಲಿ ಚರ್ಚಿಸಿ ಕೆಳಕಂಡ ಕೋರ್ಸ್‌ಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿ (ವಿ. ಸಂಖ್ಯೆ : 37.12) ಸಭೆಯಲ್ಲಿ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

"Skybird College of Aviation & Management, New Delhi, ಸಂಸ್ಥೆಯನ್ನು E.L.S.C ಎಂದು ಪರಿಗಣಿಸಿ Diploma / Certificate ಕೋರ್ಸ್‌ಗಳಾಗಿ 1. Travel and Tourism 2. Interior Designing 3. Fashion Designing 4. Artificial Intelligence ನಡೆಸುವ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲು ತೀರ್ಮಾನಿಸಲಾಯಿತು."

ಕುಲಸಚಿವರು

ಕುಲಪತಿಗಳು

ಪ್ರಸ್ತುತ ಸದರಿ ಸಂಸ್ಥೆಯೊಂದಿಗಿನ ಒಡಂಬಡಿಕೆ ಬಗ್ಗೆ ಸಭೆಯಲ್ಲಿ ಚರ್ಚಿಸಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.

**ತೀರ್ಮಾನ: ದಿನಾಂಕ: 23.09.2021 ರಂದು ರಚಿತವಾಗಿರುವ ELSC Monitoring Committee ಗೆ ಎಲ್ಲಾ ವಿವರಗಳನ್ನು ಹಾಗೂ ಒಡಂಬಡಿಕೆಯ ಪ್ರತಿಯನ್ನು ಸಲ್ಲಿಸಿ ಸಮಿತಿಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚಿಸಿ ಸೂಕ್ತ ಶಿಫಾರಸ್ಸು / ನಿರ್ಣಯಗಳೊಂದಿಗೆ ಮುಂದಿನ ಶೈಕ್ಷಣಿಕ ಸಮಿತಿ ಸಭೆಗೆ ವಿಷಯ ಮಂಡಿಸಿದಲ್ಲಿ ಅಗತ್ಯ ನಿರ್ಣಯ ಕೈಗೊಳ್ಳಲು ತೀರ್ಮಾನಿಸಲಾಯಿತು**

-----

**ವಿಷಯ ಸಂಖ್ಯೆ: 38.11**

**ವಿಷಯ : 37ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ವಿಷಯ ಸಂಖ್ಯೆ: 37.15 ರ ಬಗ್ಗೆ.**

*****

37ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯಲ್ಲಿ ವಿಷಯ ಸಂಖ್ಯೆ 37.15 ರ ವಿಷಯ ಹಾಗೂ ತೀರ್ಮಾನಕ್ಕೆ ಸಂಬಂಧಿಸಿದಂತೆ ಪ್ರಸ್ತುತ 38ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯಲ್ಲಿ ಮತ್ತೊಮ್ಮೆ ಚರ್ಚಿತವಾಗಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.

**ತೀರ್ಮಾನ: ದಿನಾಂಕ 09.10.2025 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಸಭೆ ತೀರ್ಮಾನವಾಗಿರುವಂತೆ ರೂ.650/- ಗಳನ್ನು ಪಾವತಿಸಲು ಅನುಮೋದನೆ ನೀಡಲಾಯಿತು. ಮುಂದುವರೆದು, NSDC ಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿನ ಅಂಶಗಳನ್ನು ವಿವರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸನ್ನು ಮಾಡುವ ಸಂಬಂಧ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.**

------

**ವಿಷಯ ಸಂಖ್ಯೆ: 38.12**

**ವಿಷಯ : ಶೈಕ್ಷಣಿಕ ಮಂಡಳಿ ಸಭೆಯ ವಿಷಯ ಮತ್ತು ನಡಾವಳಿ ಬಗ್ಗೆ.**

*****

ಶೈಕ್ಷಣಿಕ ಮಂಡಳಿ ಸಭೆಯು ಶಾಸನಬದ್ಧ ಸಮಿತಿಯ ಸಭೆಯಾಗಿದ್ದು, ಈ ಸಭೆಯಲ್ಲಿ ಮಂಡಿತವಾಗುವ ವಿಷಯಗಳು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿತವಾಗಿದ್ದು ಸದರಿ ಸಭೆಗೆ ಮಂಡಿತವಾಗುವ ವಿಷಯಗಳನ್ನು ಸದಸ್ಯರುಗಳಿಗೆ ಸಭೆಯ ಮುಂಚಿತವಾಗಿ ನೀಡುವಂತೆ ಮತ್ತು ನಡಾವಳಿಯನ್ನು ಸದಸ್ಯರ ಗಮನಕ್ಕೆ ತರುವ ಬಗ್ಗೆ ಚರ್ಚಿತವಾಗಿ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

**ತೀರ್ಮಾನ: ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿತವಾಗುವ ವಿಷಯಗಳನ್ನು ಶೈಕ್ಷಣಿಕ ಮಂಡಳಿ ಸದಸ್ಯರುಗಳಿಗೆ ಎರಡು ದಿನಗಳ ಮುಂಚಿತವಾಗಿ ನೀಡುವುದು ಮತ್ತು ತುರ್ತು ವಿಷಯಗಳಿದ್ದ ಸಂದರ್ಭಗಳಲ್ಲಿ ಮಾತ್ರ ಟೇಬಲ್ ಅಜೆಂಡ ಇಡುವುದು ಹಾಗೂ ಸಭೆಯ ನಡಾವಳಿಯನ್ನು ಮಾನ್ಯ ಶೈಕ್ಷಣಿಕ ಮಂಡಳಿ ಸದಸ್ಯರುಗಳಿಗೆ ನೀಡುವುದು ನಡಾವಳಿಯಲ್ಲಿನ ಅಂಶ / ತೀರ್ಮಾನಗಳಲ್ಲಿ ತಿದ್ದುಪಡಿ ಅಥವಾ ಆಕ್ಷೇಪಣೆಗಳಿದ್ದಲ್ಲಿ 2 ದಿನಗಳೊಳಗಾಗಿ ಲಿಖಿತವಾಗಿ ಕುಲಸಚಿವರಿಗೆ ಸಲ್ಲಿಸುವುದು ಎಂದು ತೀರ್ಮಾನಿಸಲಾಯಿತು.**

-----

ಅಂತಿಮವಾಗಿ ಕುಲಸಚಿವರು 38ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟ ಸಭೆಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು